ನಿದ್ದೆ ಹಾರಿ ಹೋಗಿತ್ತು.

ಮಾರನೇ ದಿನ ತನ್ನ ಲೆಕ್ಕಾಚಾರದಂತೆ ಹಣವನ್ನು ಖರ್ಚು ಮಾಡಲು ಸಾಧ್ಯವಾಗಲಿಲ್ಲ. ಆಕೆಗೆ ಆ ನೋಟನ್ನು ಬ್ಯಾಗಿನಿಂದ ಹೊರತೆಗೆಯಲೂ ಸಹ ಭಯವಾಗತೊಡಗಿತು. ಕಂಡದ್ದೆಲ್ಲವನ್ನು ತಿನ್ನುವ ಚಪಲ ಒಂದೆಡೆಯಾದರೆ ಎಲ್ಲಿ ಸಿಕ್ಕಿ ಬೀಳುವೆನೋ ಎನ್ನುವ ಆತಂಕ ಇನ್ನೊಂದಡೆ. ಹೀಗೆ ಅವಳೊಳಗಿನ ಎರಡು ವ್ಯಕ್ತಿತ್ವಗಳು ಸೆಣಸಾಟಕ್ಕಿಳಿದು ಡೋಲಾಯಮಾನವಾದ ಮನಃಸ್ಥಿತಿಯಲ್ಲಿಯೇ ಆ ಹುಡುಗಿ ಇಡೀ ಹಗಲನ್ನು ಶಾಲೆಯಲ್ಲಿ ಇದ್ದೂ ಇಲ್ಲದಂತೆ ಕಳೆದಳು. ಸಂಜೆಯ ವೇಳೆಗೆ ಅಂತೂ ಇಂತು ಗಟ್ಟಿ ಮನಸ್ಸು ಮಾಡಿ ಇಪ್ಪತ್ತು ರೂಪಾಯಿಗಳಿಗೆ ಸಿಹಿ ತಿಂಡಿ ಖರೀದಿಸಿ ತನ್ನ ಮೆಚ್ಚಿನ ಗೆಳತಿಯೊಂದಿಗೆ ತಿಂದು ಮುಗಿಸಿದಳು. ಆದರೆ ಆ ಸಿಹಿ ತಿಂಡಿಯ ನಿಜ ಸ್ವಾದ ನಾಲಿಗೆಗೆ ಹತ್ತಲೇ ಇಲ್ಲ. ಮೂರನೇ ದಿನಕ್ಕೆ ಸಮಸ್ಯೆ ಬೃಹದಾಕಾರಕ್ಕೆ ಬೆಳೆದು ನಿಂತಿತ್ತು. ಉಳಿದ ಎಂಬತ್ತು ರೂಪಾಯಿಗಳನ್ನು ಹೇಗೆ ಖರ್ಚು ಮಾಡಬೇಕು? ಯೋಚಿಸಿ ಯೋಚಿಸಿ ಆ ಪುಟ್ಟ ತಲೆ ಹನ್ನೆರಡು ಚೂರಾಗಿತ್ತು. ತರಗತಿಗಳು ಮುಗಿದ ನಂತರ ನಡೆಯುತ್ತಾ ಶಾಲಾ ಆವರಣದಲ್ಲಿ ನಿಲ್ಲಿಸಿದ್ದ ಗಾಂಧಿ ಪ್ರತಿಮೆಯ ಬಳಿ ಬಂದಳು. ಪ್ರತಿ ದಿನ ಹಾದುಹೋಗುತ್ತಿದ್ದ ಅದೇ ಜಾಗದಲ್ಲಿ ಇಂದೇಕೋ ಬಾಲಕ ಗಾಂಧಿಯ ತಪ್ಪೊಪ್ಪಿಗೆಯ ಕುರಿತಂತೆ ಕೇಳಿದ್ದ ಪಾಠ ಹಾಗೆಯೇ ಮನದಲ್ಲಿ ತೇಲಿ ಬಂತು. ಕಲ್ಲಿನಲ್ಲಿ ಕೆತ್ತಿದ್ದ ಗಾಂಧಿಯ ಪ್ರತಿಮೆ ಕೂಡಾ ಗಾಂಧಿಯ ಸಾನ್ನಿಧ್ಯವನ್ನು ಅಲ್ಲಿ ಸೃಷ್ಟಿ ಮಾಡಿತ್ತು. ಆ ಕ್ಷಣದಲ್ಲಿ ಅವಳಿಗೆ ಅರಿವಿಲ್ಲದಂತೆಯೇ ಅವಳೊಳಗೆ ಒಬ್ಬ ಸತ್ಯಸಂಧ ಗಾಂಧಿ ಪ್ರಕಟಗೊಂಡಿದ್ದ.

ತಾನು ಮಾಡಿದ ಕಳ್ಳತನವನ್ನು ಒಪ್ಪಿಕೊಂಡ ಬಾಲಕ ಗಾಂಧಿಯನ್ನು ಮತ್ತು ಮನ್ನಿಸಿ ಬುದ್ಧಿ ಹೇಳಿದ ಆತನ ತಂದೆಯನ್ನೂ ನೆನಪಿಸಿಕೊಳ್ಳುತ್ತಾ ಆ ಹುಡುಗಿ ನಡೆದ ಎಲ್ಲಾ ವಿಚಾರಗಳನ್ನು ತನ್ನ ತಾಯಿಯ ಬಳಿ ಹೇಳಿಕೊಂಡಳು. ನಿರೀಕ್ಷಿಸಿದಷ್ಟು ಸರಳವಾಗಿರಲಿಲ್ಲ ಅದರ ಪರಿಣಾಮ. ವ್ಯಗ್ರಳಾದ ಅವಳ ತಾಯಿ ಮಗಳ ಕೆನ್ನೆಗೆರಡು ಬಿಗಿದಳು. 'ಶೆಟ್ಟರು ಹೆಚ್ಚು ಹಣ ಕೊಟ್ಟದ್ದು ತಿಳಿದ ಕೂಡಲೇ ಅವರಿಗೆ ಆ ಹಣವನ್ನು ವಾಪಾಸ್ ಕೊಡಬೇಕಿತ್ತು. ಹಾಗೆ ಮಾಡದೇ ಇದ್ದದ್ದು ಮೊದಲನೇ ತಪ್ಪು. ನಂತರವಾದರೂ ನನ್ನೊಂದಿಗೆ ಹೇಳದೇ ಹೋದದ್ದು ಎರಡನೆಯ ತಪ್ಪು. ಈಗ ಬೇರೆಯವರ ಹಣವನ್ನು ಖರ್ಚು ಮಾಡಿದ್ದು ಮೂರನೆಯ ತಪ್ಪು. ಅನಾಯಾಸವಾಗಿ ಸಿಕ್ಕಿದ್ದೆಲ್ಲವೂ ನಮ್ಮದಾಗುವುದಿಲ್ಲ' ಎನ್ನುತ್ತಾ ಕೋಪ ಮತ್ತು ಕಣ್ಣೀರಿನೊಂದಿಗೆ ಮಗಳನ್ನು ಕರೆದುಕೊಂಡು ಅಂಗಡಿಗೆ ಹೋಗಿ ಕ್ಷಮಾಪಣೆಯೊಂದಿಗೆ ಅವರ ಹಣವನ್ನು ಹಿಂತಿರುಗಿಸಿದಳು.

ಇಲ್ಲಿ ತನ್ನ ನಿಲುವುಗಳಿಗೆ ಬದ್ಧರಾಗಿ ಅದನ್ನು ಸಾಧಿಸುವ ನಿಟ್ಟಿನಲ್ಲಿ ಎಂಥದ್ದೇ ಹಟಕ್ಕೆ ಬೀಳುವ ನಿಷ್ಠುರವಾದಿ ಗಾಂಧಿಯೊಬ್ಬ ಆ ಹುಡುಗಿಯ ತಾಯಿಯೊಳಗೆ ಜನ್ಮ ತಳೆದಿದ್ದರು. ಆ ಹುಡುಗಿ ಕಂಡ ಮೊದಲ ಗಾಂಧಿ ಆಕೆಯ ತಾಯಿಯೇ ಆಗಿದ್ದಳು.

ಈ ಮೇಲೆ ತಿಳಿಸಿದ ಘಟನೆಯಲ್ಲಿ ಬಂದು ಹೋಗುವ ಆ ಪುಟ್ಟ ಹುಡುಗಿಯೇ ನಾನು. ನಾನು ಕಂಡ ಮೊದಲ ಗಾಂಧಿಯೇ ನನ್ನ ತಾಯಿ.

ನನ್ನೂರಿನ ಮಠವೊಂದರಲ್ಲಿ ಗುಳ್ಯಪ್ಪ ಎನ್ನುವ ಸುಮಾರು ಅರವತ್ತರ ಆಸುಪಾಸಿನ ವ್ಯಕ್ತಿ ವಾಸವಾಗಿದ್ದಾರೆ. ಆತನನ್ನು ಜನ 'ಭಂಡಾರಿ' ಎಂದು ಕರೆಯುತ್ತಾರೆ. ಆತನ ಕೆಲಸ ಸಂಸ್ಕಾರಕ್ಕೆ ಶವವನ್ನು ಸಿದ್ಧಪಡಿಸುವುದು. ಯಾವುದೇ ಜಾತಿ ಕುಲವೆನ್ನದೆ ಕರೆ ಬಂದ ಕೂಡಲೇ ತುಂಡು ಪಂಚೆ ಬನಿಯನ್ ತೊಟ್ಟು ಹೊರಟುಬಿಡುವ ಭಂಡಾರಿ, ಸಾವು ಭೇಟಿ ಕೊಡುವ ಎಲ್ಲ ಮನೆಗಳಿಗೂ ಪರಿಚಿತ. ಸ್ವಲ್ಪವೂ ಬೇಸರಿಸದೆ ಮಣೆಯನ್ನು ಬಳಸಿ ಶವದ ಕೈಕಾಲುಗಳನ್ನು ಮಡಚಿ, ಸ್ನಾನ ಮಾಡಿಸಿ ನಂತರ ನಡೆಯುವ ಪೂಜೆ ಪುನಸ್ಕಾರಗಳಿಗೆ ಶವವನ್ನು ಅಣಿ ಮಾಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಯಾವ್ಯಾವುದೋ ಕಾಯಿಲೆಗಳಿಗೆ ತುತ್ತಾಗಿ ಮೃತಪಟ್ಟ ತೀರಾ ಮೆತ್ತಗಾದ ಅಥವಾ ಉಬ್ಬಿಕೊಂಡಿರುವ ಶವಗಳನ್ನೂ ಬೇಸರಪಟ್ಟುಕೊಳ್ಳದೆ ಶುಚಿಗೊಳಿಸುತ್ತಾರೆ. ಸತ್ತ ವ್ಯಕ್ತಿಯ ಮನೆಯವರೇ ಮುಟ್ಟಲು ಹಿಂಜರಿಯುವ ಸಂದರ್ಭಗಳಲ್ಲಿ ಭಂಡಾರಿ ನಿರ್ಲಿಪ್ತವಾಗಿ ತಮ್ಮ ಕಾಯಕವನ್ನು ಮಾಡಿ ಮುಗಿಸುತ್ತಾರೆ. ಎಲ್ಲ ಮುಗಿದ ಬಳಿಕ ಸತ್ತ ವ್ಯಕ್ತಿಯ ಮನೆಯವರು ಕೊಟ್ಟಷ್ಟೇ ಹಣವನ್ನು ಪಡೆದು ಮರುಮಾತಿಲ್ಲದೆ ಹೊರಟುಬಿಡುತ್ತಾರೆ. ತನ್ನ ಇಪ್ಪತ್ತೆರಡನೇ ವಯಸ್ಸಿನಿಂದ ಈ ಮಹತ್ತರವಾದ ಕೆಲಸವನ್ನು ಮಾಡುತ್ತಾ ಬಂದಿರುವ ಭಂಡಾರಿ, ಈವರೆಗೆ ಹತ್ತು ಸಾವಿರಕ್ಕೂ ಹೆಚ್ಚು ಶವಸಂಸ್ಕಾರಗಳನ್ನು ಮಾಡಿದ್ದಾರಂತೆ!

ನಾನು ಭಂಡಾರಿಯವರನ್ನು ನೋಡಿದಾಗಲೆಲ್ಲ ಅವರೊಳಗೊಬ್ಬ ಕಾಯಕಯೋಗಿ ಗಾಂಧಿ ಕಾಣಸಿಗುತ್ತಾರೆ. ನಮ್ಮ ಮನೆಯ ಸಮೀಪ ಇಳಿವಯಸ್ಸಿನಲ್ಲೂ ಸೊಪ್ಪು ಮಾರಿ ಜೀವನ ನಡೆಸುತ್ತಿರುವ ಬಾಷಾ ದಂಪತಿಗಳ ಕಣ್ಣುಗಳಲ್ಲಿ ಸ್ವಾವಲಂಬಿ ಗಾಂಧಿ ಮಿನುಗುತ್ತಾರೆ. ತಮ್ಮ ತಮ್ಮ ಶೌಚಾಲಯಗಳನ್ನು ತಾವೇ ಸ್ವಚ್ಛಗೊಳಿಸಿಕೊಳ್ಳುವ ಪ್ರತಿಯೊಬ್ಬರಲ್ಲೂ ಗಾಂಧಿಯ ಅಂಶವಿರುತ್ತದೆ. ಅನ್ಯಾಯದ ವಿರುದ್ಧ ಶಾಂತವಾಗಿ ಆದರೆ ದೃಢವಾಗಿ ಧ್ವನಿ ಎತ್ತುವ ಎಲ್ಲರೊಳಗೂ ಒಬ್ಬ ಹೋರಾಟಗಾರ ಗಾಂಧಿ ಜನ್ಮ ತಳೆದಿರುತ್ತಾನೆ. ಜಗತ್ತಿಗೆ ಒಳಿತನ್ನುಂಟು ಮಾಡುವ ಎಲ್ಲರೂ ಗಾಂಧಿಗಳೇ.

ಹೀಗೆ 'ಗಾಂಧಿ' ಎನ್ನುವುದೊಂದು ವ್ಯಕ್ತಿಯಲ್ಲ. ಅದೊಂದು ನೈತಿಕ ಪ್ರಜ್ಞೆ. ಅದೊಂದು ಆದರ್ಶ. ಗಾಂಧಿ ವರ್ಗಾಯಿಸಿದ ಆದರ್ಶಗಳನ್ನು ನಾವೆಲ್ಲರೂ ಹೆಗಲ ಮೇಲೆ ಹೊತ್ತು ಸಾಗಬೇಕಿದೆ ಮತ್ತು ಕೊನೆಯಲ್ಲಿ ಆ ಆದರ್ಶಗಳನ್ನು ಮುಂದಿನ ಪೀಳಿಗೆಯ ಹೆಗಲಿಗೆ ವರ್ಗಾಯಿಸಬೇಕಿದೆ.



ಗಾಂಧಿ–150ನೇ ವರ್ಷಾಚರಣೆ ಸಂದರ್ಭದಲ್ಲಿ ದಾವಣಗೆರೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರದರ್ಶನಗೊಂಡಿದ್ದ ಸ್ತಬ್ಧಚಿತ್ರ. ಫೋಟೊ: ಅನೂಪ್ ಆರ್. ತಿಪ್ಪೇಸ್ವಾಮಿ